

ಅವನನ್ನು ಇನ್ನಷ್ಟು ಹೆದರಿಸುತ್ತಿದ್ದರು. ಅವನ ಅವತಾರ ಕಂಡು ನಮಗೆ ನಗು ಬರುತ್ತಿತ್ತು. ಪಾಪ. ಅವನಿಗೆ ಸಂಕಟ!

ಅವನು ಮಂಚ ಅಥವಾ ಬಾಗಿಲಿನ ಹಿಂದೆ ಅಡಗಿಕೊಳ್ಳುವುದು, ಅವನ ಅಮ್ಮ ನಮ್ಮ ಕುಶಲ ವಿಚಾರಿಸುತ್ತಲೇ ಕೈಯಲ್ಲಿದ್ದ ಶರಬತ್ತಿನ ಟ್ರೇ ಅನ್ನು ನಿಧಾನಕ್ಕೆ ಟೇಬಲ್ ಮೇಲೆ ಇಟ್ಟು ಅವನನ್ನು ಎಳೆದು ತರುವುದು ಎಲ್ಲಾ ಯಾವುದೋ ಅಸಂಬದ್ಧ ನಾಟಕದ ದೃಶ್ಯಗಳಂತೆ ಜರುಗುತ್ತಿತ್ತು. ನಾವು ಅಲ್ಲಿ ವೀಕ್ಷಕ ಪಾತ್ರಧಾರಿಗಳಂತೆ ನಿಂತು, ಸಂದರ್ಭಕ್ಕೆ ತಕ್ಕಂತೆ ಭಾವ ಬದಲಾಯಿಸುತ್ತಾ ನೋಡುತ್ತಾ, ಅಡಿಗಡಿಗೆ ಕಮೆಂಟ್ ಹಾಕುತ್ತಿದ್ದೆವು. ನಮ್ಮ ತಮಾಷೆಯ ಕಮೆಂಟನ್ನು ಸ್ಕ್ರೀನ್‌ಶಾಟ್ ತೆಗೆದಂತೆ ತಮ್ಮ ಇಂಗ್ಲಿಷ್ ಮೀಡಿಯಮ್ಮಿನ ಶಾರ್ಪ್ ಮಸ್ತಿಷ್ಕದಲ್ಲಿ ತೆಗೆದಿಟ್ಟು, ಅವನ ಓರಗೆಯ ಗೆಳೆಯರು ಸಂದರ್ಭ ಬಂದಾಗ ಗೆಳೆಯನ ವಿರುದ್ಧವೇ ಬಳಸಿಕೊಳ್ಳುತ್ತಿದ್ದುದು ಬಹಳ ಮಜವಾದ ಸಂಗತಿ.

ಅವನ ಮನಸಿನ ಹಾರ್ಡ್ ಡಿಸ್ಕಿನ ಭೀತಿ ಮುಖದ ಡೆಸ್ಕ್ ಟಾಪ್‌ನಲ್ಲಿ ಸ್ಕ್ರೀನ್ ಪ್ಲೇಯಂತೆ ಸುನ್ನತಿಯಾಗಿ ಆಸ್ಪತ್ರೆಯಿಂದ ಮನೆಗೆ ಹಿಂದಿರುಗುವವರೆಗೂ ಮತ್ತೆ ಮತ್ತೆ ಪ್ಲೇ ಆಗುತ್ತಿತ್ತು. ಅದನ್ನು ಡಿಲೀಟ್ ಮಾಡುವ ಅಥವಾ ಅಲ್ಲಿಗೆ ಸಂತೋಷವನ್ನು ಕಾಪಿ–ಪೇಸ್ಟ್ ಮಾಡುವ ವ್ಯರ್ಥ ಪ್ರಯತ್ನವನ್ನು ಅವನ ತಂದೆತಾಯಿ ಮಾಡುತ್ತಿದ್ದರು. ಸುನ್ನತಿಯಾಗುವ ಹುಡುಗರಿರುವ ಪ್ರತಿ ಮನೆಯಲ್ಲೂ ಅದು ಮುಗಿಯುವವರೆಗೆ ಇಂಥ ದೃಶ್ಯಗಳು ಸಾಮಾನ್ಯ.